1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

ಸಿಸಿ ನಂಃ 90/2017

ಪಿಡಬ್ಲ್ಯೂಃ 10 ಸಿಡಬ್ಲ್ಯೂಃ 13

| | |
|---|---|
| ಸಾಕ್ಷಿದಾರರ ಹೆಸರು | ವಿ.ಸಿ. ಅಶೋಕ್ |
| ತಂದೆಯ ಹೆಸರು | ಲೇಟ್ ಚಿಕ್ಕಮಂಟಯ್ಯ |
| ವಯಸ್ಸು | 42 ವರ್ಷಗಳು |
| ಉದ್ಯೋಗ | ಪೊಲೀಸ್ ಇನ್ಸ್‌ಪೆಕ್ಟರ್ ಮಹಿಳಾ ಪೊಲೀಸ್ ಠಾಣೆ ಮೈಸೂರು |
| ವಾಸ | ಮೈಸೂರು |

ಸಾಕ್ಷಿಯನ್ನು ದಿನಾಂಕಃ-12.02.2026 ರಂದು ಪ್ರಮಾಣ ಮಾಡಿಸಲಾಯಿತು
ಮುಖ್ಯ ವಿಚಾರಣೆಃ- ಶ್ರೀ ಸ.ಸ.ಅ. ರವರಿಂದ.

1. ನಾನು -2014 ರಿಂದ 2016 ರವರೆಗೆ ಮಳವಳ್ಳಿ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೆನು.

2. ದಿನಾಂಕಃ- 29.04.2016 ರಂದು ಸಂಜೆ 6-30 ರ ಸಮಯದಲ್ಲಿ ಚಾಸಾ-1 ರವರು ಹಾಜರಾಗಿ ದೂರನ್ನು ಕೊಟ್ಟ ಮೇರೆಗೆ ಸ್ವೀಕರಿಸಿ ಈ ಪ್ರಕರಣ ದಾಖಲಿಸಿಕೊಂಡು ನಂತರ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-9, ಸಾಕ್ಷಿ ಸಹಿಯನ್ನು 9 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1, ಸಾಕ್ಷಿ ಸಹಿಯನ್ನು 1 ಬಿ ಎಂದು ಗುರುತಿಸಲಾಯಿತು. ದಿಃ 30-04-2016 ರಂದು ಕೃತ್ಯದ ಸ್ಥಳವಾದ ಘಟ್ಟಿಕೂಪ್ಪಲು ಗ್ರಾಮದ ಸಿದ್ದರಾಜು ಅವರ ಜಮೀನಿನ ನೇರ ರಸ್ತೆಯಲ್ಲಿ ಚಾಸಾ-1 ರವರು ಸ್ಥಳ ತೋರಿಸಿದ ಮೆರೆಗೆ ಚಾಸಾ-2 ಮತ್ತು 6

ರ ಸಮಕ್ಷಮ ಬೆಳಿಗ್ಗೆ 10 ರಿಂದ 11 ಗಂಟೆಯ ವರೆಗೆ ಮಹಜರ್ ಜರುಗಿಸಿರುತ್ತೇನೆ. ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2, ಸಾಕ್ಷಿ ಸಹಿಯನ್ನು 2 ಸಿ ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-2 ಮತ್ತು 3 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 10-05-2016 ರಂದು ಚಾಸಾ-4 ಮತ್ತು 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-1 ಅಪಘಾತಕ್ಕೆ ಇಡಾದ ಕೆಎ-11-ಇಇ-5614 ದ್ವಿಚಕ್ರ ವಾಹವನ್ನು ಚಾಸಾ-1 ರವರು ಹಾಜರುಪಡಿಸಿದ ಮೇರೆಗೆ ಚಾಸಾ-7 ಮತ್ತು 8 ರವರ ಸಮಕ್ಷಮ ಸದರಿ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಅಮಾನತ್ತು ಮಹಜರ್ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3, ಸಾಕ್ಷಿ ಸಹಿಯನ್ನು 3 ಡಿ ಎಂದು ಗುರುತಿಸಲಾಯಿತು. ದಿಃ13-05-2016 ರಂದು ಅಪಘಾತ ಪಡಿಸಿದ ವಾಹನ ಕೆಎ-11 ಇಎಪ್-3431 ಹಿರೋ ಪ್ಯಾಶನ್ ಪ್ರೋ 2 ನೇ ಆರೋಪಿ ಹಾಜರುಪಡಿಸಿದ್ದುಚಾಸಾ-9-10 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಅಮಾನತ್ತು ಪಡಿಸಿಕೂಂಡ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು 7 ಎಂದು ಗುರುಸಲಾಯಿತು. ಅದೇ ದಿನ 2 ನೇ ಆರೋೀಪಿಗೆ ಕಲಂ 133 ಐ ಎಂ ವಿ ಕಾಯ್ದೆಯ ಪ್ರಕಾರ ನೋಟಿಸನ್ನು ಜಾರಿ ಮಾಡಿರುತ್ತೇನೆ. ಅದೇ ದಿನ 2 ನೇ ಆರೋಪಿಯು ಕೊಟ್ಟಿರುವ ಪ್ರತ್ಯುತ್ತರವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ನೋಟಿಸನ್ನು ನೋಡಿ ಗರುತಿಸಿದ್ದು ನಿಪಿ-10 ಸಾಕ್ಷಿಯ ಸಹಿಯನ್ನು 10 ಎ ಎಂದು ಗುರುತಿಸಲಾಯಿತು. ಪ್ರತ್ಯುತ್ತರ ನಿಪಿ-11 ಸಾಕ್ಷಿಯ ಸಹಿಯ್ನು 11 ಎ ಎಂದು ಗುರುತಿಸಲಾಯಿತು. ನಂತರ 17-05-2016 ರಂದು 2 ನೇ ಆರೋಪಿಗೆ 41 ಕ್ಲಾಸ್ ಪ್ರಕಾರ ನೋಟಿನ್ನು ನೀಡಿರುತ್ತೇನೆ. ಅದೇ ದಿನ 2 ನೇ ಆರೋಪಿಯಿಂದ ಇಂಡಿಮಿನಿಟಿ ಬಾಂಡ್ ಪಡೆದುಕೊಂಡು ದ್ವಿಚಕ್ರ ವಾಹನದ

ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ಇಂಡಿಮಿನಿಟಿ ಬಾಂಡ್ ನೋಡಿ ಗುರುತಿಸಿದ್ದು ನಿಪಿ-12 ಮತ್ತು ಸಹಿಯನ್ನು 12 ಎ ಎಂದು ಗುರುತಿಸಲಾಯಿತು. ದಿಃ 21-05-2016 ರಂದು ಚಾಸಾ-1 ರವರಿಂದ ಇಂಡಿಮಿನಿಟಿ ಬಾಂಡ್ ಪಡೆದುಕೊಂಡು ದಾಖಲಾತಿಗಳನ್ನು ಪಡೆದುಕೊಂಡು ದ್ವಿಚಕ್ರ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ಸದರಿ ಇಂಡಿಮಿನಿಟಿ ಬಾಂಡ್ ನ್ನು ನಿಪಿ-13 ಸಹಿಯನ್ನು 13 ಎ ಎಂದು ಗುರುತಿಸಲಾಯಿತು. ನಂತರ ದಿಃ 16-05-2016 ರಂದು ಚಾಸಾ-12 ರವರಿನದ ಐ.ಎಂ.ವಿ ವರದಿಯನ್ನು ಪಡೆದುಕೊಂಡು ದಾಖಲಾತಿಗೆ ಅಳವಡಿಸಿಕೊಂಡಿರುತ್ತೇನೆ. ನಂತರ ಅಪಘಾತ ಪಡಿಸಿದ ಮತ್ತು ಅಘುಪಾತಕ್ಕೊಳಗಾದ ವಾಹನದ ಪೋಟೋವನ್ನು ತೆಗೆದು ಕಡತಕ್ಕೆ ಅಳವಡಿಸಿರುತ್ತೇನೆ. ನಂತರ ವರ್ಗಾವಣೆ ಆದ ಮೇರೆಗೆ ಚಾಸಾ-14 ರವರಿಗೆ ಕಡತವನ್ನು ವಾರ್ಗಾಯಿಸಿರುತ್ತೇನೆ. ಪ್ರಕರಣದ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿಯ ವಿಚಾರಣೆಯನ್ನು ವಿಡಿಯೋ ಕಾಲ್ ಮುಖಾಂತರ ತೆಗೆದುಕೊಳ್ಳಲಾಯಿತು.

**ಪಾಟೀಸವಾಲುಃ-** ಆರೋಪಿತರ ಪರ ಶ್ರೀ ಹೆಚ್. ಎಸ್. ಕೆ./ ವಿ.ಎನ್. ವಕೀಲರಿಂದಃ-

**3.** ಈ ಪ್ರಕಣದ ಸಂದರ್ಭದಲ್ಲಿ ನಾನು ಪಿ.ಎಸ್. ಐ ಆಗಿದ್ದೆ. ಠಾಣೆಗೆ ಎಸ್. ಹೆಚ್.ಒ ಅನ್ನು ನೇಮಕ ಮಾಡಿರುತ್ತೇನೆ. ದೂರು ಕೊಡುವ ಸಂಬದರ್ದಲ್ಲಿ ಎಸ್. ಹೆಚ್.ಒ ಇರಲಿಲ್ಲ ನಾನೇ ಇದ್ದೆ. ದೂರು ಸ್ವೀಕರಿಸುವ ಸಂದರ್ಭದಲ್ಲಿ ಎಸ್. ಹೆಚ್.ಒ ಇದ್ದರು ಎಂದು ನಮೂದು ಮಾಡಿರಲಿಲ್ಲ ಷರಾದಲ್ಲಿ ಬರೆಯಲು ಅವಶ್ಯಕತೆ ಇರಲಿಲ್ಲ ಎಂದು ಸಾಕ್ಷಿಯು ಹೇಳುತ್ತಾರೆ. ಎಸ್. ಹೆಚ್.ಒ ಇದ್ದರೂ ವಿಶೇಷವಾಗಿ ನಾನೇ ದೂರನ್ನು ಸ್ವೀಕರಿಸಿರುತ್ತೇನೆ ಎಂದರೆ ಸರಿಯಲ್ಲ. 26-02-2016 ರಂದು ಪ್ರಕರಣ ನಡೆದಿರುತ್ತದೆ ಎಂದರೆ ಸರಿ . ದೂರನ್ನು 29-04-2016 ರಂದು ಕೊಟ್ಟಿರುತ್ತಾರೆ ಎಂದರೆ ಸರಿ. 64 ದಿನದ ನಂತರ ದೂರನ್ನು ಸ್ವೀಕರಿಸುತ್ತೇನೆ ಎಂದರೆ

ಸರಿ. ಸಾಕ್ಷಿಯು ಮುಂದುವರೆದು ತಡವಾಗಿ ನೀಡುವ ಕಾರಣ ನಮೂದಿಸಿರುತ್ತೇನೆ ಎಂದು ಹೇಳುತ್ತಾರೆ. ದೂರಿನಲ್ಲಿ ಪಂಚಾಯಿತಿಯ ವಿಶೇಷ ಕಾರಣಗಳು ಹಾಗೂ ಹೇಳಿಕೆಗಳು ನಮೂದಾಗಿಲ್ಲ ಎಂದರೆ ಸರಿ . ಚಾರ್ಜ್ ಶೀಟಿನಲ್ಲಿ ಸಹ ಪಂಚಯಿತಿದಾರರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚಾಯಿತಿದಾರರು ಸಾಕ್ಷಿದಾರರ ಪಟ್ಟಿಯಲ್ಲಿ ಇಲ್ಲ ಎಂದರೆ ಸರಿ .

**4.** ದಿಃ 18-03-2016 ರಂದು ಡಿಸ್ಚಾರ್ಜ್ ಆಗಿದ್ದು 42 ದಿನ ತಡವಾಗಿ ದೂರನ್ನು ಕೊಟ್ಟಿರುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ಈ ವಿಚಾರದ ಬಗ್ಗೆ ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಪಡೆದುಕೊಳ್ಳಲು ತೊಂದರೆ ಇರಲಿಲ್ಲ. ಮಹಜರ್ ಸ್ಥಳವು ಮಣ್ಣಿನ ರಸ್ತೆ ಎಂದರೆ ಸರಿಯಲ್ಲ. 65 ದಿನ ತಡವಾಗಿ ಹೋದ ಕಾರಣ ಮಹಜರ್ ಸ್ಥಳದಲ್ಲಿ ಯಾವುದೇ ಮಾಹಿತಿ ದೊರೆತಿಲ್ಲ ಎಂದರೆ ಸರಿ. ಮಹಜರ್ ಸಾಕ್ಷಿಗಳಿಗೆ ನೋಟಿಸನ್ನು ಜಾರಿ ಮಾಡಿಲ್ಲ ಕೊಡಲು ತೊಂದರೆ ಇರಲಿಲ್ಲ. ಮಹಜರನ್ನು ಇಲಾಖೆ ಸಿಬ್ಬಂದಿ ಶ್ರೀನಿವಾಸಚಾರಿ ಎಂಬುುವರು ಬರೆದಿರುತ್ತಾರೆ. ಸದರಿಯವರು ಮಹಜರಿಗೆ ಸಹಿ ಮಾಡಿರುವುದಿಲ್ಲ. ಠಾಣೆಯಲ್ಲಿ ಮಹಜರನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಿಃ 13-05-2016 ಅಮಾನುತ್ತು ಮಹಜರಿನಲ್ಲಿ ಕೆಎ-11 ಇಎಫ್-3431 ಆರೋಪಿಯ ವಾಹನವಾಗಿರುತ್ತದೆ. ಸದರಿ ಮಹಜರ್ ನಲ್ಲಿ ಆರೋಪಿಯ ವಾಹನ ಯಾವುದೇ ರೀತಿಯ ಜಖಂ ಆಗಿರುವುದಿಲ್ಲ ಎಂದರೆ ಸರಿ .ಎರಡೂ ವಾಹನವು ಮುಖಾಮುಖಿ ಆದಾಗ ಜಖಂ ಆಗಬೇಕು ಎಂದರೆ ಸರಿ . ಎರಡೂ ವಾಹನವು ಡಿಕ್ಕಿ ಹೊಡೆದಾಗ ಎರಡೂ ವಾಹನ ಸವಾರರಿಗೂ ಗಾಯಗಳು ಆಗುತ್ತವೆ ಎಂದರೆ ಸರಿ . ನಾನು ಪ್ರಥಮ ವರ್ತಮಾನ ರದರದಿಯಲಿ 279 337 ಅಳವಡಿಸಿಕೊಂಡಿರುತ್ತೇನೆ. ಅತೀ ವೇಗವಾಗಿ ಬಂದರೆ ಎರಡೂ ವಾಹನ ಸವಾರರಿಗೆ ಗಾಯಗಳು ಆಗಬೇಕು ಎಂದರೆ ಸಾಧ್ಯತೆ ಇಲ್ಲ ಎಂದು ಹೇಳಿದ್ದಾರೆ . ಸದರಿ ವಿಚಾರವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ30-04-2016 ರಂದು ಅಮಾನತ್ತು ಮಾಡಿರುತ್ತೇವೆ ಎಂದರೆ ಸರಿ ಅದು ಗಾಯಳು ವಾಹನವಾಗಿರುತ್ತದೆ. ಸದರಿ ಮಹಜರಿಗೆ ಪಂಚರ ಸಾಕ್ಷಿಗೆ ನೋಟಿಸನ್ನು ಜಾರಿ ಮಾಡಿರುವುದಿಲ್ಲ. ಸದರಿ ವಾಹನವು ಆರೋಪಿ ವಾಹನ ವಶಪಡಿಸಿಕೊಳ್ಳುವ ಮುನ್ನ

13 ದಿನ ಮುಂಚಿತವಾಗಿ ಅಮಾನತ್ತು ಪಡಿಸಿಕೊಂಡಿರುತ್ತೇವೆ ಎಂದರೆ ಸರಿ . ಸುಳ್ಳು ದೂರಿನ ಪೂರಕವಾಗಿ ಈ ಪ್ರಕರಣ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. 26-02-2016 ರಿಂದ 18-03-2016 ರವರಗ ಎಂ.ಎಲ್.ಸಿ ಮಾಹಿತಿ ಬಂದಿರುವುದಿಲ್ಲ.ಅದೇ ರೀತಿ ಯಾರು ಸಹ ಅಪಘಾತದ ಬಗ್ಗೆ ಮಾಹಿತಯನ್ನು ನೀಡಿರುವುದಿಲ್ಲ ಅದರಂತೆ ಇದು ಸುಳ್ಳು ಪ್ರಕರಣ ಎಂದರೆ ಸರಿಯಲ್ಲ. ಗಾಯಾಳು ಪರಿಹಾರ ಪ್ರಕರಣ ವಜಾ ಆಗಿದೆ ನನಗೆ ಮಾಹಿತಿ ಗೊತ್ತಿಲ್ಲ. ಗಾಯಾಳುವಿಗೆ ವಾಹನದ ಇನ್ಸುರೆನ್ಸ್ ಡಿ.ಎಲ್ ಇತ್ತಾ ನನಗೆ ಗೊತ್ತಿಲ್ಲ. ಅಮಾನತ್ತು ಮಾಡುವ ಸಂದರ್ಬಿದಲ್ಲಿ ಕೇಳಿ ತಿಳಿದುಕೊಳ್ಳಲು ತೊಂದರೆಯಿರಲಿಲ್ಲ. ಇನ್ಸುರೆನ್ಸ್ ಇದ್ದೂ ಡಿ.ಎಲ್ ಇಲ್ಲ ಎಂದು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಪರಿಹಾರ ಪಡೆಯಲು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪಕರಣದಲ್ಲಿ ಬಾಗಶಃ ನಾನೇ ತನಿಖೆ ಮಾಡಿರುತ್ತೇನೆ

<u>ಮರು ವಿಚಾರಣೆ:- ಇಲ್ಲ.</u>

**(ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಿಂದ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

1ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ, ಮಳವಳ್ಳಿ.